

ಚಿದಾನಂದ ಸಾಲಿ

ಕಲೆ: ಸಂತೋಷ್ ಸಸಿಹಿತ್ಲು



# ಬುದ್ಧಿವಂತ

ಬೆಕ್ಕು ಬುಕ್ಕು ಓದೋದಿಲ್ಲ
ನಾಯಿ ಶಾಲೆಗ್ಹೋಗೋದಿಲ್ಲ

ಹಕ್ಕಿ ಚೆಕ್ಕು ಬರೆಯೋದಿಲ್ಲ
ಆಕಳು ಬಟ್ಟೆ ತೊಡೋದಿಲ್ಲ

ನರಿ ಸುಳ್ಳು ಹೇಳೋದಿಲ್ಲ
ಹುಲಿ ಹೊಗಳಿಕೊಳ್ಳೋದಿಲ್ಲ

ಕೊಕ್ಕರೆ ಸ್ನಾಕು ಮಾಡೋದಿಲ್ಲ
ನವಿಲಿಗೆ ತಟವಟ ಗೊತ್ತೇ ಇಲ್ಲ

ಎತ್ತಿನ ಕಾಲಿಗೆ ಚಪ್ಪಲಿಯಿಲ್ಲ
ಕತ್ತೆಗೆ ಕೆಲಸದ ಬೇಸರವಿಲ್ಲ

ಬುದ್ಧಿವಂತರ ಬಣ್ಣಕೆ ಲೆಕ್ಕ ಇಲ್ಲ
ಊಸರವಳ್ಳಿಯೂ ನಾಚುತ್ತಲ್ಲ!!



# ನಮ್ ಸಾಲಿ

ಬಿಳಿಕರಿ, ಕರಿಬಿಳಿ ಎಲ್ಲ ಮಿಕ್ಸು
ಬರೆಯಲು ಕಾಪಿ, ಓದಲು ಬುಕ್ಸು

ಕುಡಿಯಲು ನೊರೆನೊರೆ ಹಾಲು
ಉಣ್ಣಲು ಬಿಸಿಬಿಸಿ ರುಚಿಯೂಟ

ಮೇಲು ಕೀಳು ಭೇದವೇ ಇಲ್ಲ
ಸ್ನೇಹ ಪ್ರೀತಿಗೆ ಎಣೆಯೇ ಇಲ್ಲ

ಆರು ಅವಧಿ ವಿಷಯದ ಪಾಠ
ಸಂಜೆಯ ಕೊನೆಗೆ ರಸಮಯ ಆಟ

ಹಿಂದೆ ಬಿದ್ದರೆ ಅನುವರು ವೇಸ್ಟು
ಸಾಧಿಸಿ ತೋರೋಣ ಆಗಿ ಬೆಸ್ಟು

ಈಗಲೇ ಏಕೆ ದುಡಿತದ ಸಿಕ್ಕು?
ಸುಂದರ ಬಾಲ್ಯ ನಮ್ಮಯ ಹಕ್ಕು

ಸ್ಕೂಲಿನ ಲೈಫಿದು ಜಾಲೀಜಾಲಿ
ಬನ್ನಿರಿ ಬಿಟ್ಟು ಜೀತದ ಕೂಲಿ
ಅನ್ನಿರಿ ಗಟ್ಟಿಸಿ 'ಬೇಕು ಸಾಲಿ'!

